# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, ಝೆನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು-560 072**

**ವಾರ್ಡ್ ಸಂಖ್ಯೆ 73 ರಲ್ಲಿ ದಿನಾಂಕ:-06.03.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ವಿಜಯ್ ಕುಮಾರ್, ಮುಖ್ಯ ಅಭಿಯಂತರರು, ರಾರಾನಗರ, ಹಾಗೂ ನೋಡಲ್ ಅಧಿಕಾರಿ-73, ಕೊಟ್ಟಿಗೆಪಾಳ್ಯ.
2. ಶ್ರೀ. ಎನ್.ಜಿ. ಉಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲಗ್ಗೆರೆ ಉಪ ವಿಭಾಗ.
3. ಶ್ರೀ.ಜಿ.ಮೋಹನ್ ಕುಮಾರ್, ಮಾಜಿ ಸದಸ್ಯರು, ಬಿ.ಬಿ.ಎಂ.ಪಿ, ವಾ-73 ಕೊಟ್ಟಿಗೆಪಾಳ್ಯ.
4. ಶ್ರೀ.ಶಂಕರ್‌ಲಿಂಗಯ್ಯ. ಕಿರಿಯ ಅಭಿಯಂತರರು, ಬೆಸ್ಕಾಂ.
5. ಶ್ರೀ.ಮಾರುತಿ.ಎಸ್, (ಗುತ್ತಿಗೆದಾರರು) ಘನತ್ಯಾಜ್ಯ ವಿಲೇವಾರಿ.
6. ಶ್ರೀ.ದಿನೇಶ. ಎನ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
7. ಶ್ರೀ.ನಿಂಗಪ್ಪ ನಾಯ್ಕೋಡಿ, ವಾರ್ಡ್ ಮಾರ್ಷಲ್.
8. ಶ್ರೀ ಲಕ್ಷ್ಮೀನಾರಾಯಣ, ಕಿರಿಯ ಆರೋಗ್ಯ ಪರಿವೀಕ್ಷಕರು.
9. ಶ್ರೀ. ಬಾಬು, ಸೂಪರ್‌ವೈಸರ್.
10. ಸಂಘ ಸಂಸ್ಥೆಗಳ ಪದಾಧಿಕಾರಿಗಳು.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ವಾರ್ಡ್ ವ್ಯಾಪ್ತಿಯಲ್ಲಿನ ಕೋವಿಡ್19 ಬಗ್ಗೆ ಚರ್ಚಿಸುವ ವಿಚಾರ.**

1. ವಾರ್ಡ್ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕೋವಾಕ್ಸಿನ್/ಕೋವಿಷೀಲ್ಡ್ ಲಸಿಕೆಯನ್ನು ಹಿರಿಯ ನಾಗರೀಕರಿಗೆ ಒದಗಿಸಿಕೊಡುವಂತೆ ಶ್ರೀ.ಜಿ.ಮೋಹನ್ ಕುಮಾರ್ ರವರು ತಿಳಿಸಿರುತ್ತಾರೆ.

**ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ.**

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ವಾರ್ಡ್ ವ್ಯಾಪ್ತಿಯಲ್ಲಿ ಗಿಡಗಳನ್ನು ಕತ್ತರಿಸಲು ಸರಿಯಾದ ಸಲಕರಣೆಗಳನ್ನು ಪೌರಕಾರ್ಮಿಕರಿಗೆ ಒದಗಿಸಿಕೊಡಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಭೆಯಲ್ಲಿ ಸೂಚಿಸಲಾಯಿತು.
2. ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲು ಕಿರಿಯ ಆರೋಗ್ಯ ಪರವೀಕ್ಷಕರಿಗೆ ಸಭೆಯಲ್ಲಿ ಸೂಚಿಸಲಾಯಿತು.
3. ಒಣ ಮತ್ತು ಹಸಿ ಕಸವನ್ನು ಸಂಗ್ರಹ ಮಾಡುವ ಆಟೋಗಳ ಸಂಖ್ಯೆ ಕಡಿಮೆ ಇದ್ದು, ಇದರ ಬಗ್ಗೆ ಗಂಭೀರವಾಗಿ ಕ್ರಮವಹಿಸಲು ಸೂಚಿಸಿದೆ.

4. ಮಲ್ಲೈ ಮಹದೇಶ್ವರ ಸುತ್ತ ಮುತ್ತಲೂ ಕಸ ಸಂಗ್ರಹವಾಗಿದ್ದು, ಅದನ್ನು ಈ ಕೂಡಲೇ ಶುಚಿಗೊಳಿಸುವಂತೆ ಸಭೆಯಲ್ಲಿ ಸೂಚಿಸಿರುತ್ತಾರೆ.
5. ವಾರ್ಡ್ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗದಲ್ಲಿ ನಿರ್ಮಾಣಗೊಂಡಿರುವ ಅಂಗಡಿಗಳನ್ನು ತೆರವುಗೊಳಿಸಲು ಮಾರ್ಷಲ್ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿರುತ್ತಾರೆ.
6. ಸುಮ್ಮನಹಳ್ಳಿ ಸಿಗ್ನಲ್ ಬಳಿ ಹಣ್ಣಿನ ಅಂಗಡಿ ಇದ್ದು, ಇದರಿಂದ ವಾಹನ ಸಂಚಾರಣೆಗೆ ಅಡಚಣೆ ಉಂಟಾಗುತ್ತಿರುವುದರಿಂದ ಅದನ್ನು ಸ್ಥಳಾಂತರಿಸಲು ಸಭೆಯಲ್ಲಿ ಸೂಚಿಸಲಾಯಿತು.
7. ವಾರ್ಡ್ ವ್ಯಾಪ್ತಿಯ 5ನೇ ಬ್ಲಾಕ್, ಹೆಗ್ಗಡೆ ಉದ್ಯಾನವನದ ರಸ್ತೆ ಎರಡೂ ಬದಿ ಕಸವನ್ನು ತೆಗೆಯುವಂತೆ ತಿಳಿಸಿರುತ್ತಾರೆ.

**<u>ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.</u>**

1. 11ನೇ ಬ್ಲಾಕ್, ತೆರಿಗೆ ಭವನ ಮುಖ್ಯರಸ್ತೆಯಲ್ಲಿ Intensive Cleaning ನಡೆಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾ-73 ಸಹಾಯಕ ಅಭಿಯಂತರವರಿಗೆ ಸೂಚಿಸಿರುತ್ತಾರೆ.
2. ಶ್ರೀನಿವಾಸನಗರ, 6ನೇ ಮುಖ್ಯರಸ್ತೆಯಲ್ಲಿರುವ ಕಲ್ವರ್ಟ್‌ಗಳು ದುರಸ್ಥಿಗೊಂಡಿದ್ದು, ಅದನ್ನು ಶೀಘ್ರವಾಗಿ ಸರಿಪಡಿಸುವಂತೆ ತಿಳಿಸಿರುತ್ತಾರೆ.
3. 11ನೇ ಬ್ಲಾಕ್, ಕುವೆಂಪು ಸರ್ಕಲ್ ಸುತ್ತು ಮುತ್ತಲು ರಸ್ತೆ ಗುಂಡಿಗಳನ್ನು ಮುಚ್ಚುವಂತೆ ತಿಳಿಸಿರುತ್ತಾರೆ.
4. ವಾರ್ಡ್ ವ್ಯಾಪ್ತಿಯಲ್ಲಿ ಚುಣವಣೆಗೆ ಸಂಬಂಧಿಸಿದಂತೆ ರಸ್ತೆ ನಾಮಫಲಕಗಳಲ್ಲಿ ಹಾಗೂ ಬಸ್‌ಸ್ಟಾಂಡ್‌ಗಳಲ್ಲಿ ಅಂಟಿಸಿರುವ ಪಟ್ಟಿಗಳನ್ನು ತೆಗೆಯುವಂತೆ ಶ್ರೀ.ಜಿ.ಮೋಹನ್ ಕುಮಾರ್ ರವರು ತಿಳಿಸಿರುತ್ತಾರೆ.
5. ವಾರ್ಡ್‌ಗೆ ಸಂಬಂಧಿಸಿದಂತೆ 11ನೇ ಬ್ಲಾಕ್ 60 ಅಡಿ ರಸ್ತೆಯಲ್ಲಿ 3 ಹಾಗೂ 4ನೇ ಅಡ್ಡರಸ್ತೆಯಲ್ಲಿ ಡ್ರೈನ್ ಸ್ಲ್ಯಾಬ್‌ಗಳು ದುರಸ್ಥಿಯಲ್ಲಿದ್ದು, ಅವುಗಳನ್ನು ಕೂಡಲೇ ಸರಿಪಡಿಸುವಂತೆ ಶ್ರೀ.ಕುಮಾರಸ್ವಾಮಿ ರವರು ತಿಳಿಸಿರುತ್ತಾರೆ.
6. ಕೆನರಾ ಬ್ಯಾಂಕ್ ಸರ್ವೀಸ್ ರಸ್ತೆಯ ಬಳಿ ಸಾರ್ವೆ ಮರಗಳನ್ನು ಹಾಕಿರುವುದು ಸಾರ್ವಜನಿಕರ ಓಡಾಡಕ್ಕೆ ಅಡಚಣೆ ಉಂಟಾಗಿರುತ್ತದೆ. ಅದನ್ನು ಶೀಘ್ರವಾಗಿ ತೆರವುಗೊಳಿಸಲು ಮಾಲೀಕರಿಗೆ ಸೂಚಿಸುವಂತೆ ತಿಳಿರುತ್ತಾರೆ.
7. ವಾರ್ಡ್ ವ್ಯಾಪ್ತಿಯ 5ನೇ ಬ್ಲಾಕ್, ಹೆಗ್ಗಡೆ ಉದ್ಯಾನವನದ ರಸ್ತೆ ಎರಡೂ ಬದಿ ಚರಂಡಿಯಲ್ಲಿ ಹೂಳು ತೆಗೆಯುವುದು.
8. ಸುಂಕದಕಟ್ಟೆ ಪೈಪ್‌ಲೈನ್ ನಮ್ಮ ಇಂದಿರಾ ಉದ್ಯಾನವನದಲ್ಲಿ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸುವಂತೆ ಶ್ರೀಮತಿ. ಸುಮಿತ್ರಮ್ಮ ರವರು ತಿಳಿಸಿರುತ್ತಾರೆ.

**<u>ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಗ್ಗೆ ಚರ್ಚಿಸುವ ವಿಚಾರ.</u>**

1. ಶ್ರೀಮತಿ.ಕಲ್ಪನಾ, ಕಾರ್ಯಪಾಲಕ ಅಭಿಯಂತರರು ಮುಂದಿನ ಸಭೆಗೆ ಹಾಜರಾಗುವಂತೆ ಮುಖ್ಯ ಅಭಿಯಂತರರು ವಾ-73 ಸಹಾಯಕ ಅಭಿಯಂತರವರಿಗೆ ಸೂಚಿಸಿರುತ್ತಾರೆ.
2. ಶ್ರೀನಿವಾಸನಗರದ ಟೆಂಟ್ ರೋಡ್ ಬಳಿ ರಸ್ತೆ ಅಗೆದಿದ್ದು, ತುರ್ತಾಗಿ ದುರಸ್ಥಿ ಕಾರ್ಯವನ್ನು ಮಾಡುವಂತೆ ಶ್ರೀಮತಿ.ಸುಮಿತ್ರಮ್ಮ ರವರು ತಿಳಿಸಿರುತ್ತಾರೆ.
4. ಭೈರವೇಶ್ವರ ಮಿಲಿಟರಿ ಹೋಟೆಲ್, ಹೊರವರ್ತುಲ ರಸ್ತೆ ಹತ್ತಿರ ಸ್ಯಾನಿಟರಿ ಲೈನ್ ಹಾಳಾಗಿದ್ದು, ಅದನ್ನು ಸರಿಪಡಿಸಲು ಶ್ರೀ.ಜಿ.ಮೋಹನ್ ಕುಮಾರ್ ರವರು ತಿಳಿಸಿರುತ್ತಾರೆ.

<u>ವಾರ್ಡ್ ವ್ಯಾಪ್ತಿಯಲ್ಲಿನ ಬೃಹತ್ ನೀರುಗಾಲುವೆ ಬಗ್ಗೆ ಚರ್ಚಿಸುವ ವಿಚಾರ.</u>

1. 9ನೇ ಬ್ಲಾಕ್‌ನಲ್ಲಿ ಮಳೆ ನೀರುಗಾಲುವೆಯಿಂದ ಚೆರಾಮಣ್ಣ ಮನೆಯ ಹತ್ತಿರ ತಡೆಗೋಡೆ ಒಡೆದು ಹೋಗಿದ್ದು, ಅದನ್ನು ಶೀಘ್ರವಾಗಿ ಸರಿಪಡಿಸುವಂತೆ ಶ್ರೀ.ಚೆರಾಮಣ್ಣ ರವರು ಕೋರಿರುತ್ತಾರೆ.

**<u>ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಹಾಗೂ ವಾರ್ಡ್–73ರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸಭೆಗೆ ಹಾಜರಾಗದೇ ಇರುವುದಕ್ಕೆ ಈ ಕೂಡಲೇ ನೋಟೀಸ್ ಜಾರಿ ಮಾಡಲಾಗುವುದೆಂದು ನೋಡಲ್ ಅಧಿಕಾರಿ ರವರು ತಿಳಿಸಿರುತ್ತಾರೆ.</u>**

| | |
|---|---|
| ಸಹಿ:– | ಸಹಿ:– |
| **ಸದಸ್ಯ ಕಾರ್ಯದರ್ಶಿ** | **ವಾರ್ಡ್ ಸಮಿತಿ ಅಧ್ಯಕ್ಷರು,** |
| **ಹಾಗೂ ಸಹಾಯಕ ಅಭಿಯಂತರರು** | **ಮುಖ್ಯ ಅಭಿಯಂತರು(ರಾ.ರಾ.ನ)** |
| **ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ** | **ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ** |
| **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** |

**ಪ್ರತಿಗಳನ್ನು:–**

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ವಾರ್ಡ್ ಸಂಖ್ಯೆ–73ರ ಸಮಿತಿ ಅಧ್ಯಕ್ಷರು ಹಾಗೂ ಮುಖ್ಯ ಅಭಿಯಂತರವರಿಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ರಾರಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
4. ಕೌನ್ಸಿಲ್ ಕಾರ್ಯದರ್ಶಿ, ರವರ ಅವಗಾಹನೆಗೆ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, ರಾರಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ಲಗ್ಗೆರೆ ಉಪವಿಭಾಗ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
8. ಸಹಾಯಕ ನಿರ್ದೇಶಕರು (ಪಶುಸಂಗೋಪನೆ) ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡ್ಬ್ಲ್ಯೂ.ಎಸ್.ಎಸ್.ಬಿ, ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ, ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
11. ಪೋಲೀಸ್ ಇನ್ಸಪೆಕ್ಟರ್, ಕಾಮಾಕ್ಷಿಪಾಳ್ಯ ಠಾಣೆ, ನಾಗರಬಾವಿ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
12. ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

| | |
|---|---|
| **ಸದಸ್ಯ ಕಾರ್ಯದರ್ಶಿ** | **ವಾರ್ಡ್ ಸಮಿತಿ ಅಧ್ಯಕ್ಷರು,** |
| **ಹಾಗೂ ಸಹಾಯಕ ಅಭಿಯಂತರರು** | **ಮುಖ್ಯ ಅಭಿಯಂತರು(ರಾ.ರಾ.ನ)** |
| **ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ** | **ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ** |
| **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** |